JUNE 23, 2025

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

ಧಾರವಾಡ ಜಿಲ್ಲೆ, ಹುಬ್ಬಳ್ಳಿ ನಗರದ ವಿವಿಧ ಬಡಾವಣೆಗಳಿಗೆ ಭೇಟಿ ನೀಡಿದ, ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ, ಪೌರಕಾರ್ಮಿಕರೊಂದಿಗೆ, ಸ್ವಚ್ಛತಾ ಕಾರ್ಯದಲ್ಲಿ ಪಾಲ್ಗೊಂಡರು. ಶ್ರೀ ಸಿದ್ಧಾರೂಢ ಮಠದಿಂದ, ಸ್ವಚ್ಛತಾ ಕಾರ್ಯ ಆರಂಭಿಸಿದ ಅವರು, ಪೌರಕಾರ್ಮಿಕರ ಶ್ರಮ ಗೌರವಿಸುವಂತೆ, ಸ್ಥಳೀಯ ನಾಗರಿಕರು, ಅಧಿಕಾರಿಗಳಿಗೆ, ಅವರ ಕರ್ತವ್ಯ ನೆನಪಿಸಿದರು. ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ, 82 ಸಾವಿರ ಖಾಲಿ ನಿವೇಶನಗಳಿವೆ. ನಗರದ ಅಂದಗೆಡಿಸುವಲ್ಲಿ, ಖಾಲಿ ನಿವೇಶನಗಳ ಮಾಲಿಕರ ಪಾತ್ರ ಸಾಕಷ್ಟಿದೆ. ಅಕ್ಕಪಕ್ಕದವರಿಗೆ ಕಸ ಚೆಲ್ಲುವ ಗುಂಡಿಗಳಂತಾಗಿವೆ ಎಂದು, ಅವಲೋಕನದ ವೇಳೆ, ಸಚಿವ ಲಾಡ ಬೇಸರ ವ್ಯಕ್ತ ಪಡಿಸಿದರು.

<><><>

ಕಾರವಾರದ ಸೀ ಬರ್ಡ್ ನೌಕಾ ನೆಲೆ ಯೋಜನೆಗೆ, ಭೂಮಿ ನೀಡಿದ್ದ, 57 ಜನ ಭೂ ಮಾಲಿಕರಿಗೆ, 10 ಕೋಟಿ 47 ಲಕ್ಷ ರೂಪಾಯಿ, ಹೆಚ್ಚುವರಿ ಪರಿಹಾರ ಮೊತ್ತವನ್ನು, ಜಿಲ್ಲಾ ಉಸ್ತುವಾರಿ ಸಚಿವ, ಮಂಕಾಳ ವೈದ್ಯ ವಿತರಿಸಿದರು. ಕಾರವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಆಯೋಜಿತ ಸಭೆಯಲ್ಲಿ, ಮಾತನಾಡಿದ ಸಚಿವರು, ಬಾಕಿ 60 ಕೋಟಿ ರೂಪಾಯಿ ಪರಿಹಾರ ಹಣ, ಕೇಂದ್ರದಿಂದ ಶೀಘ್ರ ಬಿಡುಗಡೆಯಾಗುವ ನಿರೀಕ್ಷೆಯಿದೆ ಎಂದರು. ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಮಾತನಾಡಿ, ಜಿಲ್ಲೆಯ ಜನರ ತ್ಯಾಗದಿಂದ ಸೀ ಬರ್ಡ್ ಯೋಜನೆ ಜಿಲ್ಲೆಗೆ ಬಂದಿದೆ. ಸಂತ್ರಸ್ಥರಿಗೆ ಹೆಚ್ಚುವರಿ ಪರಿಹಾರ ಮೊತ್ತ ನೀಡಲು, ಕೇಂದ್ರ ರಕ್ಷಣಾ ಖಾತೆ ಸಚಿವರು, ಪ್ರತ್ಯೇಕ ಅಧಿಕಾರಿಯನ್ನು ನಿಯೋಜಿಸಿ, ಕ್ರಮ ಕೈಗೊಂಡಿದ್ದಾರೆ ಎಂದರು.

<><><>

ಅಪರೇಶನ್ ಸಿಂಧು ಮೂಲಕ, ಯುದ್ಧಗ್ರಸ್ತ ಇರಾನ್ ದೇಶದಿಂದ ಕೇಂದ್ರ ಸರ್ಕಾರ ಹಾಗೂ ಭಾರತೀಯ ರಾಯಬಾರ ಕಚೇರಿ, ಭಾರತೀಯ ವಿದ್ಯಾರ್ಥಿಗಳನ್ನು ಸುರಕ್ಷಿತವಾಗಿ ತಾಯ್ನಾಡಿಗೆ ಕರೆ ತಂದಿದೆ. ಇರಾನ್ ರಾಜಧಾನಿ ಟೆಹರಾನ್ ನಲ್ಲಿ ವೈದ್ಯಕೀಯ ವ್ಯಾಸಂಗ ಮಾಡುತ್ತಿದ್ದ ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿಬಿದನೂರು ತಾಲೂಕು, ಆಲೀಪುರದ ಒಟ್ಟು 11 ಜನ ವಿದ್ಯಾರ್ಥಿಗಳು ಸುರಕ್ಷಿತವಾಗಿ ತಮ್ಮ ಮನೆಗಳಿಗೆ ತಲುಪಿದ್ದಾರೆ. ಈ ಬಗ್ಗೆ ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ಹಂಚಿಕೊಂಡಿದ್ದಾರೆ, ಟೆಹರಾನ್ ನಲ್ಲಿ ವೈದ್ಯಕೀಯ ವ್ಯಾಸಂಗದಲ್ಲಿ ಮಾಡುತ್ತಿದ್ದ, ಆಲೀಪುರದ ವೈದ್ಯ ವಿದ್ಯಾರ್ಥಿ ಸೈಯ್ಯದ್ ಮೊಹಮ್ಮದ್ ತಾಕಿ....

<><><>

ಧ್ವನಿ: ಸೈಯ್ಯದ್ ಮೊಹಮ್ಮದ್ ತಾಕಿ 35 ಸೆಕೆಂದುಗಳು

<><><>

ಮಾಜಿ ಸಚಿವ, ದಿವಂಗತ ಕೆ.ಎಚ್. ಪಾಟೀಲ್ ಅವರು, ಸಹಕಾರಿ ಕ್ಷೇತ್ರದ ಮೂಲಕ ಸಾಮಾಜೋ- ಆರ್ಥಿಕತೆಗೆ ಅಭಿವೃದ್ಧಿಗೆ ಒತ್ತು ನೀಡಿ, ಜನ ಸಾಮಾನ್ಯರ ಕಲ್ಯಾಣಕ್ಕೆ ಆದ್ಯತೆ ನೀಡಿದ್ದರು ಎಂದು ಗೃಹ ಖಾತೆ ಸಚಿವ ಜಿ.ಪರಮೇಶ್ವರ ಹೇಳಿದ್ದಾರೆ. ಕೊಪ್ಪಳ ಜಿಲ್ಲೆ, ಕುಕನೂರು ತಾಲೂಕಿನ ಶಿರೂರ ಪುನರ್ವಸತಿ ಗ್ರಾಮದಲ್ಲಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ ಸಂಸ್ಥೆ ವತಿಯಿಂದ ಆಯೋಜಿಸಲಾಗಿದ್ದ, ಮಾಜಿ ಸಚಿವ ಕೆ.ಎಚ್ ಪಾಟೀಲ್ ಅವರ ಪುತ್ಥಳಿ ಅನಾವರಣಗೊಳಿಸಿ ಮಾತನಾಡಿದರು. ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳಿಗೆ, ಪ್ರತಿ ವರ್ಷ 52 ಸಾವಿರ ಕೋಟಿ ರೂಪಾಯಿ ಹಣವನ್ನು ವಿನಿಯೋಗಿಸುತ್ತಿದೆ ಎಂದರು.

<><><>

ಮುಂಗಾರು ಹಾಗೂ ಮೃಗಶಿರಾ ಮಳೆ ವಾಡಿಕೆಯಂತೆ, ಉತ್ತಮವಾಗಿ ಹಾವೇರಿ ಜಿಲ್ಲೆಯಾದ್ಯಂತ ಸುರಿದಿದೆ. ಜಿಲ್ಲೆಯಲ್ಲಿ ಒಟ್ಟು 3 ಲಕ್ಷದ, 14 ಸಾವಿರ ಹೆಕ್ಟರ್ ಕೃಷಿ ಭೂಮಿಯಲ್ಲಿ, ಬಿತ್ತನೆಯ ಗುರಿ ಇದೆ. ಈಗಾಗಲೇ 2 ಲಕ್ಷದ 34 ಸಾವಿರ ಹೆಕ್ಟರ್ ಪ್ರದೇಶದಲ್ಲಿ ಬಿತ್ತನೆ ಕಾರ್ಯ ಮುಗಿದಿದೆ. ಶೇಕಡ 74 ದಶಾಂಶ 4-3 ರಷ್ಟು ಬಿತ್ತನೆ ಪೂರ್ಣಗೊಂಡಿದೆ. ಎಂದು, ಕೃಷಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನ, ತಿಳಿಸಿದ್ದಾರೆ.

<><><>

ಹಿರಿಯ ಪತ್ರಕರ್ತೆ ಮಡಿಕೇರಿ ಮೂಲದ ಕುಸುಮಾ ಶಾನಭಾಗ ಬೆಂಗಳೂರಿನಲ್ಲಿ ನಿಧನರಾದರು. ಅವರಿಗೆ 78 ವರ್ಷ ವಯಸ್ಸಾಗಿತ್ತು. ಕಾದಂಬರಿಕಾರ ಭಾರತಿಸುತ ಅವರ ಸುಪುತ್ರಿಯಾದ ಇವರು, ಕಾಯಕ ಕಾರ್ಪಣ್ಯ, ಮಣ್ಣಿಂದ ಎದ್ದವರು ಕೃತಿಗಳನ್ನು ರಚಿಸಿದ್ದರು. ಅಂತ್ಯಸಂಸ್ಕಾರವು ಕೆಂಗೇರಿಯ ಚಿತಾಗಾರದಲ್ಲಿ ನೆರವೇರಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

<><><>

ಅನಾರೋಗ್ಯದಿಂದ ಬಳಲುತ್ತಿರುವ ಮಾಜಿ ಸಂಸದ ಪ್ರೊಫೆಸರ್ ಐ.ಜಿ ಸನದಿ ಅವರು, ಹುಬ್ಬಳ್ಳಿ ಕೆಎಂಸಿಆರ್ಐ ಆಸ್ಪತ್ರೆಗೆ ದಾಖಲಾಗಿದ್ದಾರೆ. ಕರ್ನಾಟಕ ರಾಜ್ಯ ಸರ್ಕಾರದ ಮುಖ್ಯ ಸಚೇತಕ ಸಲೀಂ ಅಹ್ಮದ್ ಆಸ್ಪತ್ರೆಗೆ ಭೇಟಿ ನೀಡಿ ಸನದಿ ಅವರ ಆರೋಗ್ಯ ವಿಚಾರಿಸಿದರು.

<><><>

ಕೊಪ್ಪಳದಲ್ಲಿ ಜರುಗಿದ ಡಾಕ್ಟರ ಬಸವರಾಜ ದಿಂಡೂರ ಅವರ 'ಜೀವನೋತ್ಸಾಹ' ಕೃತಿ ಲೋಕಾರ್ಪಣೆ ಕಾರ್ಯಕ್ರಮಕ್ಕೆ ಹಾವೇರಿ ಸಂಸದ ಬಸವರಾಜ ಬೊಮ್ಮಾಯಿ ಅವರು ಚಾಲನೆ ನೀಡಿದರು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.